**ಓ ಎಸ್ ನಂಃ 63/2017**

**ಪಿ. ಡಬ್ಲ್ಯೂ ಃ 1**

**ದಿಃ 6.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಹೆಚ್ ಕೆ ಎನ್ ವಕೀಲರಿಂದ ಃ**

ನಾನು ಪಿ ಯು ಸಿ 2ನೆ ವರ್ಷದವರೆಗೆ ಓದಿದ್ದೇನೆ. 1 ರಿಂದ 7 ನೆ ತರಗತಿಯನ್ನು ಮುದ್ದನಹಳ್ಳಿಯಲ್ಲಿ ಓದಿದ್ದೇನೆ. ಹೈಸ್ಕೂಲ್ ವಿದ್ಯಾಭ್ಯಾಸವನ್ನು ಜಿ ಹೊಸಹಳ್ಳಿಯಲ್ಲಿ ಕಾಲೇಜು ವಿದ್ಯಾಭ್ಯಾಸವನ್ನು ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ಮಾಡಿದ್ದೇನೆ, ನನ್ನ ವಿದ್ಯಾಭ್ಯಾಸವೆಲ್ಲ ಗುಬ್ಬಿ ತಾಲ್ಲೂಕಿನಲ್ಲಿ ಆಗಿದೆ ಎಂದರೆ ಸರಿ. ನಾನು ಹುಟ್ಟಿದ್ದು ಗುಬ್ಬಿ ತಾ. ಮುದ್ದನಹಳ್ಳಿ ಎಂದರೆ ಸರಿ. ಮುದ್ದನಹಳ್ಳಿಯಿಂದ ಚಿಕ್ಕನಹಳ್ಳಿ ಗ್ರಾಮ 20 ರಿಂದ 25 ಕಿ.ಮೀ. ಆಗುತ್ತದೆ. ಚಿಕ್ಕನಹಳ್ಳಿ ಮಾಗಡಿ ತಾ. ನಲ್ಲಿ ಬರುತ್ತದೆ. ನನ್ನ ಮತ್ತು ನನ್ನ ತಾಯಿ ಆಧಾರ್ ಕಾರ್ಡ್ ಗಳು, ರೇಷನ್ ಕಾರ್ಡ್ ಗಳು ಮತ್ತು ಮತದಾರರ ಚೀಟಿಗಳು ಗುಬ್ಬಿ ತಾ. ಮುದ್ದನಹಳ್ಳಿ ಗ್ರಾಮದಲ್ಲಿವೆ ಎಂದರೆ ಸರಿ. ನಾನು ಹುಟ್ಟಿ 1 ವರ್ಷದ ನಂತರ ನಾವು ಚಿಕ್ಕನಹಳ್ಳಿ ಬಿಟ್ಟಿದ್ದೇವೆ. ಅದಕ್ಕೂ ಮೊದಲು ನಮ್ಮ ತಾಯಿ ಚಿಕ್ಕನಹಳ್ಳಿಯಲ್ಲಿ ಇದ್ದರು. ನಾವು ಖಾಯಂ ಆಗಿ ಮುದ್ದನಹಳ್ಳಿಯಲ್ಲಿ ಇದ್ದೇವು ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ತಾಯಿ ಚಿಕ್ಕನಹಳ್ಳಿಯಲ್ಲಿ ವಾಸವಿದ್ದ ಬಗ್ಗೆ ಯಾವುದೆ ದಾಖಲೆ ಕೊಟ್ಟಿಲ್ಲ.

ನಿ ಪಿ 3 ರಲ್ಲಿ ಲಕ್ಷ್ಮೀದೇವಮ್ಮ ಕೋಂ ರಂಗೇಗೌಡ ಎಂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಆಸ್ತಿಗಾಗಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಅದರಲ್ಲಿ ನಮ್ಮ ತಾಯಿಯ ಹೆಸರು ಇಲ್ಲ ಎಂದರೆ ಸರಿ. ನಿ ಪಿ 4 ನ್ನು ನಮ್ಮ ತಾಯಿ ಪೊಲೀಸ್ ಠಾಣೆಯಿಂದ ತಂದಿರುತ್ತಾರೆ. ಅದರಲ್ಲಿ ದೂರುದಾರರ ಹೆಸರು ಗಂಗನರಸಿಂಹಯ್ಯ ಎಂದು ಇದೆ ಎಂದರೆ ಸರಿ. 3 ನೆ ಪ್ರತಿವಾದಿಯು ಅವರ ತಂದೆ ತೀರಿಕೊಂಡಾಗ ಠಾಣೆಗೆ ಹೋಗಿ ದೂರು ಕೊಟ್ಟಿದ್ದರು ಎಂದರೆ ಸರಿ. ನಿ ಪಿ 8 ರಲ್ಲಿ 58 ವರ್ಷ 9 ತಿಂಗಳಿಂದ ನಮ್ಮ ತಾಯಿ ಗುಬ್ಬಿ ತಾಲ್ಲೂಕು, ಮುದ್ದನಹಳ್ಳಿಯಲ್ಲಿ ವಾಸವಾಗಿದ್ದಾರೆ ಎಂದು ಕಂದಾಯ ಇಲಾಖೆಯವರು ಪ್ರಮಾಣಪತ್ರ ಕೊಟ್ಟಿದ್ದಾರೆ ಎಂದರೆ ಸರಿ. ನಿ ಪಿ 9 ರ ಪ್ರಕಾರ ನನ್ನ ಆದಾಯ ಪ್ರಮಾಣಪತ್ರ ಕೊಟ್ಟಿದ್ದಾರೆ ಎಂದರೆ ಸರಿ. ನಿ ಪಿ 10 ರ ಪ್ರಕಾರ ಗುಬ್ಬಿ ತಹಶೀಲ್ದಾರ್ ಇವರು ನನಗೆ ಜಾತಿ ಪ್ರಮಾಣಪತ್ರ ಕೊಟ್ಟಿದ್ದಾರೆ ಎಂದರೆ ಸರಿ. ನಿ ಪಿ 11 ಇದು ಇತ್ತೀಚೆಗೆ ಮಾಡಿಸಿದ ಲಗ್ನಪತ್ರಿಕೆ ಎಂದರೆ ಸರಿ. ಸುಮಾರು 40 ವರ್ಷಗಳ ಹಿಂದಿನ ನಮ್ಮ ತಾತ ಮಾಡಿಸಿದ ಲಗ್ನಪತ್ರಿಕೆ ಇರುತ್ತದೆ. ನಿ ಪಿ 15 ರಲ್ಲಿ ನನ್ನ ಹೆಸರು ಶಂಕರಮೂರ್ತಿ ಎಂ.ಆರ್ ಎಂದು ಇದೆ ಎಂದರೆ ಸರಿ. ಎಂ.ಆರ್ ಎಂದರೆ ಮುದ್ದನಹಳ್ಳಿ ರಂಗೇಗೌಡ ಅವರ ಮಗ

ಶಂಕರಮೂರ್ತಿ ಎಂದರೆ ಸರಿ. ನನ್ನ ಎಲ್ಲ ಶಾಲಾ ದಾಖಲೆಗಳಲ್ಲಿ ಶಂಕರಮೂರ್ತಿ ಎಂ.ಆರ್ ಎಂದು ಇದೆ ಎಂದರೆ ಸರಿ.

ಐಟಂ ನಂಬರ್ 1 ಸ.ನಂ. 17/1 ರಲ್ಲಿ 1 ಎಕರೆ 24 ಗುಂಟೆ ರ ಪೂರ್ವಕ್ಕೆ ರಾಮಕೃಷ್ಣಯ್ಯ ಇವರ ಜಮೀನು ಪಶ್ಚಿಮಕ್ಕೆ ಸರ್ಕಾರಿ ರಸ್ತೆ, ಉತ್ತರಕ್ಕೆ ರಂಗಯ್ಯ ನ ಜಮೀನು ಮತ್ತು ದಕ್ಷಿಣಕ್ಕೆ ಮರಿಯಪ್ಪನ ಜಮೀನು ಇರುತ್ತದೆ. ಸ.ನಂ. 80/3 ರಲ್ಲಿ 5 ಎಕರೆ 11 ಗುಂಟೆ ಪೂರ್ವಕ್ಕೆ ರಂಗಸ್ವಾಮಯ್ಯ ಇವರ ಜಮೀನು,ಪಶ್ಚಿಮಕ್ಕೆ ಸರ್ಕಾರಿ ಗೋಮಾಳ, ಉತ್ತರಕ್ಕೆ ನರಸಿಂಹಯ್ಯ ಇವರ ಜಮೀನು ದಕ್ಷಿಣಕ್ಕೆ ರಸ್ತೆ ಇರುತ್ತದೆ, ಸ.ನಂ. 46/ಪಿ 1 ಇದು 39 ಗುಂಟೆ ಸ.ನಂ. 44/ಪಿ 4 ಇದು 39 ಗುಂಟೆ ಇವುಗಳು ಒಂದೇ ಚೆಕ್ ಬಂದಿ ಹೊಂದಿದ್ದು ಪೂರ್ವಕ್ಕೆ ರಂಗೇಗೌಡ ಮತ್ತು ಕೃಷ್ಣಪ್ಪ ಇವರ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಗೋಮಾಳ, ಉತ್ತರಕ್ಕೆ ನಾರಾಯಣಪ್ಪ ಇವರ ಜಮೀನು ದಕ್ಷಿಣಕ್ಕೆ ಖಲೀಲ್ ಸಾಬ್ ಇವರ ಜಮೀನು ಇರುತ್ತದೆ. ಐಟಂ ನಂಬರ್ 5 ರಲ್ಲಿ 12 ಗುಂಟೆ ಅದರ ಚೆಕ್ ಬಂದಿ ಪೂರ್ವಕ್ಕೆ ನರಸಿಂಹಯ್ಯನ ಜಮೀನು ಪಶ್ಚಿಮಕ್ಕೆ ನರಸಿಂಹಯ್ಯ ನ ಜಮೀನು, ಉತ್ತರಕ್ಕೆ ಖರಾಬ್ ಜಮೀನು ಮತ್ತು ದಕ್ಷಿಣಕ್ಕೆ ಕೃಷ್ಣಪ್ಪನ ಜಮೀನು ಇರುತ್ತದೆ. ಎಲ್ಲ ದಾವಾ ಸ್ವತ್ತುಗಳನ್ನು ನಾನು ನೋಡಿದ್ದೇನೆ. ನನ್ನ ಪ್ರಮಾಣಪತ್ರದಲ್ಲಿ ಚಿಕ್ಕನಹಳ್ಳಿ ಗ್ರಾಮ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಆ ಊರಿನ ಹೆಸರು ಚಿಕ್ಕಹಳ್ಳಿ ಎಂದರೆ ಸರಿ. ಸ.ನಂ. 17/1 ಮಾತ್ರ ಬೇರೆ ಊರಿನಲ್ಲಿದೆ. ಉಳಿದ ಸ್ವತ್ತುಗಳು ಚಿಕ್ಕಹಳ್ಳಿಯಲ್ಲಿರುತ್ತವೆ.

ನಾನು ನನ್ನ ತಂದೆಯ 2ನೆ ಹೆಂಡತಿ ಲಕ್ಷ್ಮೀದೇವಮ್ಮ , ನನ್ನ ಚಿಕ್ಕಪ್ಪನ ಹೆಂಡತಿ ಶಾಂತಮ್ಮ ಮತ್ತು ಮಕ್ಕಳ ಮೇಲೆ ದಾವೆಯನ್ನು ಮಾಡಿದ್ದೇನೆ. ನರಸಿಂಹಯ್ಯ ಇವರಿಗೆ 6 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳಿರುತ್ತಾರೆ. ನರಸಿಂಹಯ್ಯ ಇವರ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ. ರಂಗೇಗೌಡ ಬಿನ್ ನರಸಿಂಹಯ್ಯ ಬೇರೆ ಮತ್ತು ಮುದ್ದನಹಳ್ಳಿಯ ರಂಗೇಗೌಡ ಬೇರೆ ಎಂದರೆ ಸರಿಯಲ್ಲ. ನನಗೆ ನರಸಿಂಹಯ್ಯ ಇವರ ಕುಟುಂಬದ ಬಗ್ಗೆ ಯಾವುದೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಅವರ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಯಾರದೋ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಪ್ರತಿವಾದಿ 5 ರಿಂದ 8 ರವರಿಗೆ ಅರ್ಧಭಾಗ ಮತ್ತು ನಮಗೆ ಅರ್ಧಭಾಗ ಬರಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪ್ರತಿವಾದಿಗಳಿಗೆ ಮಾತ್ರ ಸೇರಿದ್ದು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ವಿರುದ್ದ ಇನ್ನೊಂದು ದಾವೆ ಮಾಡಿದ್ದಾರೆ ಎಂದರೆ ಸರಿ. ಅದು ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮಾಗಡಿಯಲ್ಲಿದೆ. ಆ ದಾವೆಯಲ್ಲಿ

ರಂಗೇಗೌಡ ಇವರು ಪ್ರತಿವಾದಿ 1, 3 ಮತ್ತು 4 ರವರ ಹೆಸರಿನಲ್ಲಿ ವಿಲ್ ಮಾಡಿದ್ದೇನೆ ಎಂದು ಹೇಳಿರುವುದು ಸರಿಯಲ್ಲ.

ನಾನು, ನನ್ನ ತಾಯಿ ರಂಗೇಗೌಡ ಇವರ ಜೊತೆ ಇದ್ದ ಯಾವುದೆ ಪೋಟೋಗಳು ಇಲ್ಲ. ನಮಗೆ ಮತ್ತು ರಂಗೇಗೌಡ ಇವರಿಗೆ ಯಾವುದೆ ಸಂಬಂಧ ಇಲ್ಲದಿದ್ದರಿಂದ ಆ ರೀತಿಯ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. 1ನೆ ಪ್ರತಿವಾದಿಯ ಚಿಕ್ಕಹಳ್ಳಿಯಲ್ಲಿ ವಾಸವಾಗಿರುವ ಮನೆಯ ಚೆಕ್ ಬಂದಿ , ಖಾತೆ ನಂಬರ್ ನನಗೆ ಗೊತ್ತಿಲ್ಲ. ಅವರ ಮನೆಯ ಬಾಗಿಲು ದಕ್ಷಿಣಕ್ಕೆ ಇದೆ. ದಾವಾ ಸ್ವತ್ತುಗಳು ಈಗ ಪ್ರತಿವಾದಿ 1 ಮತ್ತು 5 ರವರ ಹೆಸರಿನಲ್ಲಿವೆ. ದಾವಾ ಸ್ವತ್ತುಗಳನ್ನು ನಾನು ನೋಡಿಲ್ಲದೆ ಇದ್ದರೂ ಸಹ ದಾವಾ ಆಸ್ತಿಗಳನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾವು ಪ್ರತಿವಾದಿಗಳ ರಕ್ತ ಸಂಬಂಧಿಕರಲ್ಲ ಮತ್ತು ದಾವಾ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ದಿನಾಂಕ ಃ 16.10.2016 ರಂದು ರಂಗೇಗೌಡ ಇವರು ಯಾವುದೆ ವಿಲ್ ಮಾಡಿಲ್ಲ ಎಂದರೆ ಸಾಕ್ಷಿ ತಪ್ಪಾಗಿರಬಹುದು ಎಂದು ಹೇಳುತ್ತಾರೆ. ದಿನಾಂಕ ಃ 16.01.2016 ರಂದು ರಂಗೇಗೌಡ ಇವರು ಪ್ರತಿವಾದಿ 1 , 3 ಮತ್ತು 4 ರವರಿಗೆ ವಿಲ್ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ರಂಗೇಗೌಡ ಇವರ ಪಿತ್ರಾರ್ಜಿತ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ 2 ರವರು ದಿನಾಂಕ ಃ 20.07.1990 ರಲ್ಲಿ ಹುಟ್ಟಿದ್ದಾರೆ ಎಂದರೆ ಸರಿ. ಅವರು ನನಗಿಂತ 10 ವರ್ಷ ದೊಡ್ಡವರು ಎಂದರೆ ಸರಿ. ಪ್ರತಿವಾದಿ 3 ರವರು ದಿನಾಂಕ ಃ 3.06.1991 ರಲ್ಲಿ ಹುಟ್ಟಿದ್ದಾರೆ ಎಂದರೆ ಸರಿ. ಆತ ನನಗಿಂತ 9 ವರ್ಷ ದೊಡ್ಡವನು ಎಂದರೆ ಸರಿ. ಸಿ ಆರ್ ಕೃಷ್ಣವೇಣಿ ಎಂಬ ಮಗಳು ರಂಗೇಗೌಡರಿಗೆ ಇದ್ದರು ಎಂದರೆ ಸರಿ. ಅವಳು ದಿನಾಂಕ ಃ 28.06.1986 ರಂದು ಹುಟ್ಟಿದ್ದರು ಎಂದರೆ ಸರಿ. ನನಗಿಂತ 14 ವರ್ಷ ದೊಡ್ಡವಳು ಎಂದರೆ ಸರಿ. ಪ್ರತಿವಾದಿ 4 ರವರು 4.04.1994 ರಲ್ಲಿ ಹುಟ್ಟಿದ್ದು ನನಗಿಂತ 6 ವರ್ಷ ದೊಡ್ಡವನು ಎಂದರೆ ಸರಿ. ನನ್ನ ಜನ್ಮ ದಿನಾಂಕ ಃ 1.04.2000 ಇರುತ್ತದೆ. ಹಾಗಾಗಿ ರಂಗೇಗೌಡರಿಗೆ ಪ್ರತಿವಾದಿ 1 ರಿಂದ 4 ರವರು ಮಾತ್ರ ವಾರಸುದಾರರು ಎಂದರೆ ಸರಿಯಲ್ಲ. 2ನೆ ವಾದಿ ಅವರ ಹೆಂಡತಿ ಅಲ್ಲ. ನಾನು ಅವರ ಮಗನಲ್ಲ ಎಂದರೆ ಸರಿಯಲ್ಲ.

ನಿ ಪಿ 1 ನ್ನು ಮಾಡಿಸುವ ಸಮಯದಲ್ಲಿ ನಾನು ಮತ್ತು ನಮ್ಮ ತಾಯಿ ಆಧಾರ್ ಕಾರ್ಡ್‌ಗಳನ್ನು ಕೊಟ್ಟಿದ್ದೇವೆ. ನಿ ಪಿ 1 ನ್ನು ಕಂದಾಯ ಅಧಿಕಾರಿಗಳ ಜೊತೆ ಸೇರಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾವು ಮತ್ತು ಪ್ರತಿವಾದಿಗಳು ಒಂದೆ ಕುಟುಂಬದವರ ಎಂದು ತೋರಿಸಲು ತಹಶೀಲ್ದಾರ್ ಮಾಗಡಿ ಇವರಿಂದ ಯಾವುದೆ ದಾಖಲೆ ಪಡೆದುಕೊಂಡಿಲ್ಲ. ಎಲ್ಲ ದಾಖಲೆಗಳನ್ನು ಪ್ರತಿವಾದಿ 1 ಮತ್ತು 5 ರವರ ಹೆಸರಿನಲ್ಲಿ ಕ್ರಮಬದ್ದವಾಗಿ ಬದಲಾಯಿಸಿದ್ದಾರೆ ಎಂದರೆ ಸರಿಯಲ್ಲ.

ಮದುವೆಯಾದಾಗಿನಿಂದ 1ನೆ ಪ್ರತಿವಾದಿ ರಂಗೇಗೌಡರ ಜೊತೆ ಚಿಕ್ಕಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನನಗೆ ದಾವೆ ಬಗ್ಗೆ ಯಾವುದೆ ಮಾಹಿತಿ ಇಲ್ಲದೆ ಇದ್ದರೂ ಸಹ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**